# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 68/2017

ಸಿಡಬ್ಲ್ಯೂ-1 ಪಿಡಬ್ಲ್ಯೂ-1

| | | |
|---|---|---|
| ಹೆಸರು | : | ಸಂತೋಷ ರಾಠೋಡ |
| ತಂದೆಯ ಹೆಸರು | : | ಶಂಕರ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಪಿ.ಎಸ್.ಐ |
| ವಾಸ ಸ್ಥಳ | : | ಮಿರಿಯಾಣ, ತಾಃ ಚಿಂಚೊಳ್ಳಿ |

ದಿನಾಂಕ 29-02-2020

ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ

ನಾನು ದಿಃ 13.06.2016 ರಿಂದ 19.02.2017 ರವರೆಗೆ ಸೇಡಂ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ. ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 20.07.2016 ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಮದ್ಯಾನ 12.30 ಗಂಟೆಗೆ ಸುಮಾರಿಗೆ ಸೇಡಂ ಪಟ್ಟಣದ ಘೋಟಿ ಗಿರಣಿ ಕ್ರಾಸ ಹತ್ತಿರ ಅಕ್ರಮವಾಗಿ ಕಲಬೆರಕೆ ಸೇಂದಿ ಮಾರಾಟ ಮಾಡುತ್ತಿದ್ದ ಬಗ್ಗೆ ಬಾತ್ಮಿ ಬಂದಿದ್ದು, ಸದರಿ ಬಾತ್ಮಿ ವಿಷಯವನ್ನು ನಮ್ಮ ಸಿಬ್ಬಂದಿಗಳಾದ ಚಾಸಾ-4 ರಿಂದ 8 ರವರಿಗೆ ತಿಳಿಸಿ, ಇಬ್ಬರು ಪಂಚರನ್ನು ಬರಮಾಡಿಕೊಂಡು ದಾಳಿಗೆ ಹೋಗುವ ವಿಷಯವನ್ನು ಪಂಚರಾದ ಚಾಸಾ-2 ಮತ್ತು 3 ರವರಿಗೆ ತಿಳಿಸಿ, ಎಲ್ಲರೂ ಸೇರಿಕೊಂಡು ನಮ್ಮ ಠಾಣಾ ಜೀಪನಲ್ಲಿ ಕುಳಿತುಕೊಂಡು ಮದ್ಯಾನ 12.35 ಗಂಟೆ ಠಾಣೆಯನ್ನು ಬಿಟ್ಟು ಬಾತ್ಮಿ ಬಂದ ಸ್ಥಳಕ್ಕೆ ಮದ್ಯಾನ 12.55 ಕ್ಕೆ ತಲುಪಿದ್ದು, ಜೀಪನ್ನು ಅಲ್ಲಿಯೇ ಸ್ವಲ್ಪ ದೂರದಲ್ಲಿ ನಿಲ್ಲಿಸಿ ಮರೆಯಲ್ಲಿ ನಿಂತುಕೊಂಡು ವಾಚ್ ಮಾಡಲಾಗಿ, ಸಾರ್ವಜನಿಕರು ಸೇಂದಿ ಖರೀದಿ ಮಾಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು, ದಾಳಿ ಮಾಡಿ ಆರೋಪಿತರನ್ನು ಹಿಡಿದು ವಿಚಾರಿಸಲಾಗಿ ತಮ್ಮ ಹೆಸರು 1. ಶಂಕರ ತಂದೆ ಶರಣಪ್ಪ ಬೈರಾಮಡಗಿ, 2. ಕಾಂತಮ್ಮ ಗಂಡ ಶಂಕರ ರಾಠೋಡ, 3. ಶಾರದಾಬಾಯಿ ಗಂಡ ಸುರೇಶ ಜಾದವ ಅಂತಾ ತಿಳಿಸಿದ್ದು ಅವರ ಹತ್ತಿರವಿದ್ದ ಒಂದು ಲೀ. ಅಳತೆಯ ಸುಮಾರು 43 ಸೇಂದಿ ಪ್ಯಾಕೇಟಗಳು ಮತ್ತು ರೂ.870/- ಇದ್ದವು. ಸದರಿ ಸೇಂದಿ ಪ್ಯಾಕೇಟಗಳ ಪೈಕಿ ಸೇಂದಿಯನ್ನು ಒಂದು ಬಾಟಲನಲ್ಲಿ ಶಾಂಪಲಗಾಗಿ ತೆಗೆದುಕೊಂಡು, ಉಳಿದ ಮಾಲುಗಳನ್ನು ಪಂಚರ ಸಮಕ್ಷಮ ಮದ್ಯಾನ 01.00 ರಿಂದ 02.00 ಗಂಟೆ ವರೆಗೆ ಜಪ್ತಿಪಡಿಸಿಕೊಂಡು ಸ್ಥಳದಲ್ಲಿ ವಿವರವಾದ ಪಂಚನಾಮೆ ಬರೆದು, ಪಂಚರಿಗೆ ಓದಿ ಹೇಳಿ ಸಹಿ ಪಡೆದುಕೊಂಡಿರುತ್ತೇನೆ. ನಂತರ ಮು.ಮಾ. ಹಾಗೂ ಆರೋಪಿಯೊಂದಿಗೆ ಠಾಣೆಗೆ ಬಂದು ಠಾಣಾಧಿಕಾರಿಗಳಿಗೆ ವರದಿ ಮಾಡಿಕೊಂಡಿರುತ್ತೇನೆ. ಸದರಿ ದಿನ ದಾಳಿ ಮಾಡಿ ಬಂದಿಸಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ದಿನ ಜರುಗಿಸಿದ ಪಂಚನಾಮೆಯನ್ನು ನಿಪಿ-1, ಸಾಕ್ಷಿ ಸಹಿಯನ್ನು ನಿಪಿ-1(ಎ), ಠಾಣಾಧಿಕಾರಿಗಳಿಗೆ ಮಾಡಿಕೊಂಡ ವರದಿಯನ್ನು ನಿಪಿ-2, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು

ಗುರುತಿಸಲಾಯಿತು. ಶಾಂಪಲಗಾಗಿ ಜಪ್ತಿಪಡಿಸಿಕೊಂಡ ಸೇಂದಿ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ. ಎಮ್. ಆರೋಪಿ ಪರ ವಕೀಲರಿಂದ**

ದಾಳಿ ಸ್ಥಳದ ಹತ್ತಿರದ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಸಂಚರಿಸುತ್ತವೆ ಎಂದರೆ ಸರಿ. ದಾಳಿ ಸ್ಥಳದ ಹತ್ತಿರ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ದಾಳಿ ಮಾಡಿದ ಸ್ಥಳದ ಯಾರಿಗೆ ಸಂಬಂಧಿಸಿರುತ್ತದೆ ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಸಲ್ಲಿಸಿಲ್ಲ. ನಿಪಿ-1 ರಲ್ಲಿ ಆ ಕುರಿತು ಹೇಳಿಲ್ಲ ಎಂದರೆ ಸಾರ್ವಜನಿಕರ ಸ್ಥಳ ಇರುತ್ತದೆ ಎಂದು ಹೇಳುತ್ತಾರೆ. ಆ ರೀತಿ ನಿಪಿ-1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾವು ದಾಳಿ ಮಾಡುವ ಸಮಯದಲ್ಲಿ ಮೂರು ಆರೋಪಿತರ ಪೈಕಿ ಯಾರ ಹತ್ತಿರ ಎಷ್ಟು ಮಾಲು ಇತ್ತು ಎಂಬುದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಮು.ಮಾ.1 ಕ್ಕೆ ಅಂಟಿಸಿದ ಚೀಟಿಯಲ್ಲಿ ಮೇಲನೋಟಕ್ಕೆ 2 ನೇ ಪಂಚರ ಸಹಿ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ದಾಳಿ ಸಮಯದಲ್ಲಿ 4-5 ಜನ ಸಾರ್ವಜನಿಕರು ಸೇರಿದ್ದರು. ಪಂಚರ ಹಾಗೂ ನಮ್ಮ ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆ ಸಾರ್ವಜನಿಕರ ಹೇಳಿಕೆ ಪಡೆದುಕೊಂಡಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಸದರಿ ದಿನ ನಮಗೆ ಯಾವುದೇ ಮಾಹಿತಿ ಬಂದಿಲ್ಲ, ನಾನು, ನಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ಯಾವುದೇ ದಾಳಿ ಕುರಿತು ಘಟನಾ ಸ್ಥಳಕ್ಕೆ ಹೋಗಿಲ್ಲ, ಆರೋಪಿತರ ಮೇಲೆ ಯಾವುದೇ ದಾಳಿ ಮಾಡಿ ಮು.ಮಾ.ಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮು.ಮಾ.ಗಳಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ವರದಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಯ ಅಂಕಿ-ಸಂಖ್ಯೆಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 68/2017

ಸಿಡಬ್ಯೂ-5 ಪಿಡಬ್ಯೂ-2

ಹೆಸರು : ಶಿವಕುಮಾರ

ತಂದೆಯ ಹೆಸರು : ನಾಗೇಂದ್ರಪ್ಪ

ವಯಸ್ಸು : 34 ವರ್ಷ

ಉದ್ಯೋಗ : ಪೋಲಿಸ ಪೇದೆ

ವಾಸ ಸ್ಥಳ : ಮುಧೋಳ

ದಿನಾಂಕ 29-02-2020

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 2014 ರಿಂದ 2020 ರವರೆಗೆ ಸೇಡಂ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 20.07.2016 ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಮದ್ಯಾನ 12.30 ಗಂಟೆಗೆ ಸುಮಾರಿಗೆ ಸೇಡಂ ಪಟ್ಟಣದ ಥೋಟಿ ಗಿರಣಿ ಕ್ರಾಸ ಹತ್ತಿರ ಅಕ್ರಮವಾಗಿ ಕಲಬೆರಕೆ ಸೇಂದಿ ಮಾರಾಟ ಮಾಡುತ್ತಿದ್ದ ಬಗ್ಗೆ ಬಾತ್ಮಿ ಬಂದ ವಿಷಯವನ್ನು ಚಾಸಾ-1 ರವರು ನನಗೆ ,ಚಾಸಾ-4, 6 ರಿಂದ 8 ರವರಿಗೆ ತಿಳಿಸಿ, ಇಬ್ಬರು ಪಂಚರನ್ನು ಬರಮಾಡಿಕೊಂಡು ದಾಳಿಗೆ ಹೋಗುವ ವಿಷಯವನ್ನು ಪಂಚರಾದ ಚಾಸಾ-2 ಮತ್ತು 3 ರವರಿಗೆ ತಿಳಿಸಿ, ಎಲ್ಲರೂ ಸೇರಿಕೊಂಡು ಒಂದು ಖಾಸಗಿ ವಾಹನದಲ್ಲಿ ಕುಳಿತುಕೊಂಡು ಮದ್ಯಾನ 12.40 ಗಂಟೆ ಠಾಣೆಯನ್ನು ಬಿಟ್ಟು ಬಾತ್ಮಿ ಬಂದ ಸ್ಥಳಕ್ಕೆ ಮದ್ಯಾನ 01.00 ಕ್ಕೆ ತಲುಪಿದ್ದು, ಜೀಪನ್ನು ಅಲ್ಲಿಯೇ ಸ್ವಲ್ಪ ದೂರದಲ್ಲಿ ನಿಲ್ಲಿಸಿ ಮರೆಯಲ್ಲಿ ನಿಂತುಕೊಂಡು ವಾಚ್ ಮಾಡಲಾಗಿ ಮೂರು ಜನರು ಸಾರ್ವಜನಿಕರಿಗೆ ಸೇಂದಿ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು ಅವರ ಮೇಲೆ ದಾಳಿ ಮಾಡಿ ಹಿಡಿದು ವಿಚಾರಿಸಲಾಗಿ ತಮ್ಮ ಹೆಸರು 1. ಶಂಕರ ತಂದೆ ಶರಣಪ್ಪ ಬೈರಾಮಡಗಿ, 2. ಕಾಂತಮ್ಮ ಗಂಡ ಶಂಕರ ರಾಠೋಡ, 3. ಶಾರದಾಬಾಯಿ ಗಂಡ ಸುರೇಶ ಜಾದವ ಅಂತಾ ತಿಳಿಸಿದ್ದು ಅವರ ಹತ್ತಿರವಿದ್ದ ಒಂದು ಲೀ. ಅಳತೆಯ ಸುಮಾರು 43 ಸೇಂದಿ ಪ್ಯಾಕೇಟಗಳು ಹಾಗೂ ರೂ.870/- ಇದ್ದವು. ಸದರಿ ಸೇಂದಿ ಪ್ಯಾಕೇಟಗಳ ಪೈಕಿ ಒಂದು ಬಾಟಲನಲ್ಲಿ ಶಾಂಪಲಗಾಗಿ ತೆಗೆದುಕೊಂಡು, ಉಳಿದ ಮಾಲುಗಳನ್ನು ಪಂಚರ ಸಮಕ್ಷಮ ಚಾಸಾ-1 ರವರು ಮದ್ಯಾನ 01.00 ರಿಂದ 02.00 ಗಂಟೆ ವರೆಗೆ ಜಪ್ತಿಪಡಿಸಿಕೊಂಡು ಸ್ಥಳದಲ್ಲಿ ವಿವರವಾದ ಪಂಚನಾಮೆ ಬರೆದು, ಪಂಚರಿಗೆ ಓದಿ ಹೇಳಿ ಸಹಿ ಪಡೆದುಕೊಂಡಿರುತ್ತಾರೆ. ನಂತರ ಮು.ಮಾ. ಹಾಗೂ ಆರೋಪಿಯೊಂದಿಗೆ ಠಾಣೆಗೆ ಬಂದಿದ್ದು ಚಾಸಾ-1 ರವರು ಆರೋಪಿತರ ವಿರುದ್ಧ ಕ್ರಮ ಕೈಗೊಳ್ಳಲು ಠಾಣಾಧಿಕಾರಿಗಳಿಗೆ ವರದಿ ಮಾಡಿಕೊಂಡಿರುತ್ತಾರೆ . ಸದರಿ ದಿನ ದಾಳಿ ಮಾಡಿ ಬಂದಿಸಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಶಾಂಪಲಗಾಗಿ ಜಪ್ತಿಪಡಿಸಿಕೊಂಡ ಸೇಂದಿ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ.1

ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಶ್ರೀ ಎ. ಎಮ್. ಆರೋಪಿ ಪರ ವಕೀಲರಿಂದ**

ದಾಳಿ ಸಮಯದಲ್ಲಿ ಸಾರ್ವಜನಿಕರು ಯಾರು ನಿಂತಿರಲಿಲ್ಲ, ಆದರೆ ಹೋಗುವುದು ಬರುವುದು ಮಾಡುತ್ತಿದ್ದರು. ದಾಳಿ ಸ್ಥಳದ ಹತ್ತಿರ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಚಾಸಾ-1 ರವರು ಯಾವುದೇ ಸಾರ್ವಜನಿಕರ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾವು ದಾಳಿ ಮಾಡುವ ಸಮಯದಲ್ಲಿ ಯಾರ ಹತ್ತಿರ ಸೇಂದಿ ಪಾಕೇಟಗಳು ಇದ್ದವು ಎಂದರೆ ಸಾಕ್ಷಿಯು ಒಂದು ಚೀಲದಲ್ಲಿ ಇದ್ದವು ಎಂದು ಹೇಳುತ್ತಾರೆ. ಆರೋಪಿತರ ವಶದಿಂದ ರೂ.870/- ಜಪ್ತಿಪಡಿಸಿಕೊಂಡಿರುತ್ತೇವೆ. ಯಾವ ಆರೋಪಿಯಿಂದ ಜಪ್ತಿಪಡಿಸಿಕೊಂಡಿರುತ್ತೇವೆ ನನಗೆ ಗೊತ್ತಿಲ್ಲ. ಮು.ಮಾ.1 ಕ್ಕೆ ಅಂಟಿಸಿದ ಚೀಟಿಯಲ್ಲಿ ಹೆಬ್ಬಟ್ಟು ಯಾರದು ಇರುತ್ತದೆ ಎಂಬುದರ ಬಗ್ಗೆ ಎಲ್.ಟಿ.ಎಮ್. ಹಾಕಿರುವುದಿಲ್ಲ ಎಂದರೆ ಸರಿ. 1 ಮತ್ತು 3 ನೇ ಆರೋಪಿತರ ಮನೆ ಬಸವನಗರದಲ್ಲಿ ಇರುತ್ತದೆ ಎಂದರೆ ಸರಿ. 2 ನೇ ಆರೋಪಿ ಮನೆ ಭೋಟಿ ಗಿರಣಿ ಹತ್ತಿರ ಇರುತ್ತದೆ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಸದರಿ ದಿನ ನಮಗೆ ಯಾವುದೇ ಮಾಹಿತಿ ಬಂದಿಲ್ಲ, ನಾನು, ನಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ಯಾವುದೇ ದಾಳಿ ಕುರಿತು ಘಟನಾ ಸ್ಥಳಕ್ಕೆ ಹೋಗಿಲ್ಲ, ಆರೋಪಿತರ ಮೇಲೆ ಯಾವುದೇ ದಾಳಿ ಮಾಡಿ ಮು.ಮಾ.ಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮು.ಮಾ.ಗಳಿಗೂ ಯಾವುದೇ ಸಂಬಂದ ಇರದೇ ಇದ್ದರೂ ಸಹ ಆರೋಪಿತರ ವಿರುದ್ದ ಚಾಸಾ-1 ರವರು ಸುಳ್ಳು ವರದಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಇಲಾಖೆಯ ಅಂಕಿ-ಸಂಖ್ಯೆಗೊಸ್ಕರ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಮೇಲಾಧಿಕಾರಿಗಳಾಗಿರುವುದರಿಂದ ಅವರ ಮಾತುಕೇಳಿಕೊಂಡು, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 68 /2017

ಸಿಡಬ್ಲ್ಯೂ–2 ಪಿಡಬ್ಲ್ಯೂ–3

| | |
|---|---|
| ಹೆಸರುಃ | ನಾಗಣ್ಣ ತಾಯಿತ |
| ತಂದೆ ಹೆಸರುಃ | ಬಸಪ್ಪ |
| ವಯಸ್ಸುಃ | 48 ವರ್ಷ |
| ಉದ್ಯೋಗಃ | ಟೇಲರಿಂಗ |
| ವಾಸ ಸ್ಥಳಃ | ಸೇಡಂ |

ದಿನಾಂಕ 29–02–2020

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ.**

ನನಗೆ ಚಾಸಾ–3 ರವರ ಪರಿಚಯವಿಲ್ಲ. ಆರೋಪಿತರ ಪರಿಚಯವಿಲ್ಲ. ಈಗ ನೋಡುತ್ತಿರುವ ದಾಖಲೆ ಮೇಲಿನ ಸಹಿ ನನ್ನದು ಅದು ಜಪ್ತಿಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು. ಈಗ ಸುಮಾರು 2–3 ವರ್ಷಗಳ ಹಿಂದೆಪೊಲೀಸ ಠಾಣೆಗೆ ಬಟ್ಟೆ ಆಡರ ಪಡೆಯಲು ಹೋದಾಗ ಪೋಲಿಸರು ನಿಪಿ–1 ಕ್ಕೆ ಸಹಿ ಪಡೆದುಕೊಂಡಿರುತ್ತಾರೆ. ಅದನ್ನು ಯಾವ ಕಾರಣಕ್ಕಾಗಿ ಬರದಿರುತ್ತಾರೆ ನನಗೆ ಗೊತ್ತಿಲ್ಲ, ಅದರಲ್ಲಿರುವ ವಿಷಯವನ್ನು ನನಗೆ ಓದಿ ಹೇಳಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ, ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಶಾಂಪಲ ಬಾಟಲಿಯನ್ನು ನಾನು ಈ ಮುಂಚೆ ನೋಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸ.ಸ.ಅ. ರರಿಂದ**

ದಿನಾಂಕ 20.07.2016 ರಂದು ನನಗೆ ಮತ್ತು ಚಾಸಾ–3 ರವರಿಗೆ ಸೇಡಂ ಪೋಲಿಸರು ಸೇಡಂ ಪಟ್ಟಣದ ಛೋಟಿ ಗಿರಣಿ ಕ್ರಾಸ ಹತ್ತಿರ ಆರೋಪಿತರು ಅಕ್ರಮವಾಗಿ ಕಲಬೆರಕೆ ಸೇಂದಿಯನ್ನು ಮಾರಾಟ ಮಾಡುತ್ತಿದ್ದು ದಾಳಿಗೆ ಹೋಗುವುದಿದ್ದು, ನಮಗೆ ಪಂಚರಾಗಿ ಬರಲು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾವು ಒಪ್ಪಿಕೊಂಡು ಎಲ್ಲರೂ ಸೇರಿ ದಾಳಿ ಕುರಿತು ಠಾಣಾ ಜೀಪನಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸೇಡಂ ಪೋಲಿಸರು ನಮ್ಮ ಸಮಕ್ಷಮ ಆರೋಪಿತರ ವಶದಿಂದ 43 ಸೇಂದಿ ಪಾಕೇಟಗಳನ್ನು ರೂ.870/–

ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸೇಂದಿ ಪಾಕೇಟಗಳ ಪೈಕಿ ಒಂದು ಬಾಟಲಿನಲ್ಲಿ ಸೇಂದಿಯನ್ನು ಶಾಂಪಲಗಾಗಿ ತೆಗೆದುಕೊಂಡು ಶಿಲ್ ಮಾಡಿ ನಾವು ಹಾಗೂ ಅಧಿಕಾರಿಗಳು ಸಹಿ ಮಾಡಿದ ಚೀಟಿಗಳನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ಹಾಗೂ ಮು.ಮಾ.ಗಳೊಂದಿಗೆ ಠಾಣೆಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ-1 ರಂತೆ ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ ಆರೋಪಿತರ ವಶದಿಂದ ಸೇಂದಿ ಹಾಗೂ ಹಣವನ್ನು ಜಪ್ತಿಪಡಿಸಿಕೊಂಡಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.